ವಿಶ್ವವ್ಯಾಪಕ ಭಗವತ್‌ತತ್ತ್ವ, ಅನಂತ ಶಕ್ತಿ! ರೋಮೇ ರೋಲಾ ಅವರೂ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರ ನುಡಿಗಳು ಸ್ಮರಣೀಯ: "ಶ್ರೀರಾಮಕೃಷ್ಣರು ಸಕಲ ಶಕ್ತಿಗಳ ಮೂಲವಾದ ಆದ್ಯಾಶಕ್ತಿಯ ಅಂಶ!"

ಆದುದರಿಂದಲೇ ಸ್ವಾಮಿ ವಿವೇಕಾನಂದರು ತಮ್ಮ ದಿವ್ಯ ಗುರುವಿನ ಬಗ್ಗೆ ಏನನ್ನು ಹೇಳಲೂ ಅಳುಕುತ್ತಿದ್ದರು. ಅವರ ಹೆಸರು ಕೇಳಿದರೆ ಸಾಕು, ಅವರ ಮನ ತುಂಬಿಬರುತ್ತಿತ್ತು, ಭಾವೋನ್ಮತ್ತರಾಗುತ್ತಿದ್ದರು. ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ರಚಿಸುವಂತೆ ಸ್ವಾಮೀಜಿಯವರನ್ನು ಒಮ್ಮೆ ಗಿರೀಶ್ ಚಂದ್ರ ಘೋಷ್ ಕೇಳಿಕೊಂಡಾಗ, ಅವರು ಕಂಬನಿ ಸುರಿಸುತ್ತಾ ತಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸಿದರು. ಅವರಿಂದ ಅದು ಅಸಾಧ್ಯವೇನೂ ಆಗಿರಲಿಲ್ಲ. ಆದರೆ ದೇಶಕಾಲಗಳ ಪರಿಧಿಯನ್ನು ಮೀರಿ ನಿಂತು ಬೆಳಗುತ್ತಿರುವ ಶ್ರೀರಾಮಕೃಷ್ಣರ ಅನಂತ ದಿವ್ಯತೆಯನ್ನು ತಾವು ಬಣ್ಣಿಸಹೊರಟರೆ, ಆ ಅನಂತತೆಗೆ ಕುಂದು ಬಂದೀತೆಂಬ ಅಳುಕು ಅವರಿಗೆ! ಶ್ರೀರಾಮಕೃಷ್ಣರ ಜೀವನ ಚರಿತ್ರೆ ಬರೆಯುವಾಗ ಮ್ಯಾಕ್ಸ್ ಮುಲ್ಲರ್ ಸ್ವಾಮಿ ವಿವೇಕಾನಂದರಿಂದ ಕೆಲವು ಮಾಹಿತಿಗಳನ್ನು ಬಯಸಿದರು. ಆದರೆ ಸ್ವಾಮೀಜಿ ಆ ಕಾರ್ಯವನ್ನು ತಮ್ಮ ಸೋದರ ಸಂನ್ಯಾಸಿಗಳಾದ ಸ್ವಾಮಿ ಶಾರದಾನಂದರಿಗೆ ವಹಿಸಿದರು. ತಾವೇ ಆ ಕಾರ್ಯವನ್ನು ಮಾಡಲು ಹಿಂಜರಿದುದಕ್ಕೆ ಕಾರಣವನ್ನು ಹೀಗೆ ವಿವರಿಸುತ್ತಾರೆ: "ಒಂದು ವೇಳೆ ನಾನೇನಾದರೂ ಶ್ರೀರಾಮಕೃಷ್ಣರ ಕುರಿತಾಗಿ ಅವರಿಗೆ ಹೇಳಹೊರಟಿದ್ದರೆ, ತತ್ತ್ವಶಾಸ್ತ್ರಗಳಿಂದ, ಧರ್ಮಗ್ರಂಥಗಳಿಂದ ಹಾಗೂ ಕ್ರೈಸ್ತಧರ್ಮ ಗ್ರಂಥಗಳಿಂದ ಕೂಡ ವಿಪುಲವಾಗಿ ಉದ್ಧರಿಸಿ ಹೇಳುತ್ತಾ, ಜಗತ್ತಿನ ಮಿಕ್ಕೆಲ್ಲ ಅವತಾರಗಳಿಗಿಂತಲೂ ಶ್ರೀರಾಮಕೃಷ್ಣರು ಪರಮಶ್ರೇಷ್ಠರು ಹೇಗೆಂಬುದನ್ನು ನಿಸ್ಸಂದಿಗ್ಧವಾಗಿ ಸಾಬೀತುಪಡಿಸುತ್ತಿದ್ದೆ. ಆದರೆ ಬಹುಶಃ ಆ ವೃದ್ಧರಿಗೆ (ಮ್ಯಾಕ್ಸ್ ಮುಲ್ಲರ್) ಅದನ್ನು ಜೀರ್ಣಿಸಿಕೊಳ್ಳಲು ಆಗುತ್ತಿರಲಿಲ್ಲವೇನೋ!"

ಅಂದರೆ, ಯಾರೀ ಶ್ರೀರಾಮಕೃಷ್ಣರು? ಈ ಪ್ರಶ್ನೆ ಸದಾ ನಮ್ಮನ್ನು ಕಾಡುತ್ತಿರಲಿ. ನಮ್ಮ ಮನಸ್ಸು ಅವರ ಬಗ್ಗೆ ಸದಾ ಚಿಂತಿಸುತ್ತಿರಲಿ, ಧ್ಯಾನಿಸುತ್ತಿರಲಿ. ಆಗ ಒಂದಲ್ಲ ಒಂದು ದಿನ ಪರಮ ಕೃಪಾಳುವಾದ ಅವರೇ ತಾವು ಯಾರೆಂಬುದನ್ನು ನಮಗೂ ತೋರಿಸಿಕೊಡುತ್ತಾರೆ. ಆ ಸುದಿನಕ್ಕಾಗಿ ಕಾತರದಿಂದ ಕಾಯೋಣ. ✪

## ಪ್ರಹಸನ ಪ್ರಸಂಗ

ಬಹಳ ಹಿಂದಿನಿಂದಲೂ ಪ್ರಸಿದ್ಧವಾಗಿದ್ದ ಕ್ಷೌರಿಕನ ಅಂಗಡಿಯ ಎದುರಿನಲ್ಲಿಯೇ ಮತ್ತೊಂದು ಹೊಸ ಕ್ಷೌರದ ಅಂಗಡಿ ಪ್ರಾರಂಭವಾಯಿತು. ಗಿರಾಕಿಗಳನ್ನು ಆಕರ್ಷಿಸಲು ಹೊಸಬ ತನ್ನ ಅಂಗಡಿಯ ಹೊರಗಡೆ ಒಂದು ದೊಡ್ಡ ಬಣ್ಣಬಣ್ಣದ ಬೋರ್ಡ್ ತೂಗುಹಾಕಿದ: "ಕೇವಲ ಏಳು ರೂಪಾಯಿಗೆ ಕೇಶಶೃಂಗಾರ."

ತನ್ನ ಗಿರಾಕಿಗಳನ್ನು ಕಳೆದುಕೊಳ್ಳಲು ಬಯಸದ ಹಳೆಯ ಅಂಗಡಿಯವನು ಕೂಡಲೇ ತಾನೂ ಒಂದು ದೊಡ್ಡ ಬೋರ್ಡ್ ಬರೆಸಿದ: "ಏಳು ರೂಪಾಯಿಯ ಕೇಶ ಶೃಂಗಾರವನ್ನು ಸರಿಪಡಿಸಲಾಗುತ್ತದೆ."

❖ ❖ ❖

ಹಳ್ಳಿಯಲ್ಲಿ ವಾಸವಾಗಿದ್ದ ಮುದುಕನೊಬ್ಬನು ಆಲೂಗಡ್ಡೆ ಬೆಳೆಯುತ್ತಿದ್ದ ತನ್ನ ನೆಲವನ್ನು ಉಳಲು ಬಯಸಿದ. ಆದರೆ ನಿಶ್ಶಕ್ತಿಯಿಂದ ಅದು ಅವನಿಗೆ ಸಾಧ್ಯವಾಗಲಿಲ್ಲ. ತನ್ನ ಒಬ್ಬನೇ ಮಗನನ್ನು ಕರೆಯೋಣವೆಂದರೆ ಅವನು ಕೊಲೆಯ ಪ್ರಕರಣದಲ್ಲಿ ಸಿಕ್ಕಿಕೊಂಡು ಸೆರೆಮನೆಯಲ್ಲಿ ಬಂದಿಯಾಗಿದ್ದ. ಮುದುಕ ಮಗನಿಗೆ ಕಾಗದ ಬರೆದು ತನ್ನ ಅಳಲನ್ನು ಹೀಗೆ ತೋಡಿಕೊಂಡ:

"ಪ್ರೀತಿಯ ಬಾಬು,

ಈ ಸಲ ನಾನು ನನ್ನ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುವುದು ಅಸಾಧ್ಯವೆಂದೇ ತೋರುತ್ತದೆ. ನನಗೆ ವಯಸ್ಸಾಗಿರುವುದರಿಂದ ಅಗೆಯುವ ಕೆಲಸ ನನ್ನಿಂದ ಸಾಧ್ಯವಿಲ್ಲ. ನೀನು ಇಲ್ಲಿದ್ದಿದ್ದರೆ ನನಗೆ ಸಮಸ್ಯೆಗಳೇ ಇರುತ್ತಿರಲಿಲ್ಲ. ನನಗಾಗಿನೀನು ಏನು ಬೇಕಾದರೂ ಮಾಡಬಲ್ಲೆ ಎಂಬ ವಿಶ್ವಾಸ ನನಗಿದೆ. ಇದನ್ನೆಲ್ಲ ನೆನೆದು ಬಹಳ ಬೇಸರವಾಗುತ್ತಿದೆ.

—ಪ್ರೀತಿಯ ತಂದೆ"

ಕೆಲದಿನಗಳ ಬಳಿಕ ಮಗನಿಂದ ಉತ್ತರ ಬಂದಿತು:

"ಪ್ರೀತಿಯ ಅಪ್ಪ,

ದಯವಿಟ್ಟು ನಿನ್ನ ತೋಟವನ್ನು ಅಗೆಯಬೇಡ! ಹೆಣಗಳನ್ನೆಲ್ಲ ನಾನು ಅಲ್ಲಿಯೇ ಹೂತಿಟ್ಟಿರುವೆ. —ಪ್ರೀತಿಯ ಬಾಬು"

ಮರುದಿನ ಬೆಳಗ್ಗೆ ನಾಲ್ಕು ಘಂಟೆಗೇ ಪೋಲೀಸ್ ಅಧಿಕಾರಿಗಳು ಬಂದು ಜಮೀನನ್ನೆಲ್ಲ ಅಗೆದು ಹುಡುಕಾಡಿದರು. ಯಾವ ಹೆಣವೂ ಸಿಗಲಿಲ್ಲ! ಮುದುಕನಲ್ಲಿ ಕ್ಷಮೆಯಾಚಿಸಿ, ಹೊರಟುಹೋದರು. ಅದೇ ದಿನದಂದು ಮಗನಿಂದ ಮತ್ತೊಂದು ಪತ್ರ ಬಂದಿತು ಮುದುಕನಿಗೆ:

"ಪ್ರೀತಿಯ ಅಪ್ಪ,

ಈಗ ನೀನು ಆಲೂಗಡ್ಡೆಗಳನ್ನು ನೆಡಬಹುದು. ಈಗಿನ ಸ್ಥಿತಿಯಲ್ಲಿ, ಇದಕ್ಕಿಂತ ಹೆಚ್ಚು ಮಾಡುವುದು ನನ್ನಿಂದ ಸಾಧ್ಯವಿಲ್ಲ. —ಪ್ರೀತಿಯ ಬಾಬು" ✪